**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.6**

**ಚಾಸಾ.13**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಾರದ |
| ಗಂಡನ ಹೆಸರು | - | ಸತೀಶ |
| ವಯಸ್ಸು | - | 34 ವರ್ಷ |
| ಉದ್ಯೋಗ | - | ಗೃಹಿಣಿ |
| ವಿಳಾಸ | - | ಮುಂಡ್ಕೂರು |

ದಿನಾಂಕಃ 08-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

1. ಮೃತ ಕೃತಿಕ್ ನ ಪರಿಚಯ ಇದೆ. ಅವನು ಕುಕ್ಕೆಹಳ್ಳಿಯ ಬಜೆ ಗ್ರಾಮದಲ್ಲಿ ವಾಸಮಾಡಿಕೊಂಡಿದ್ದ. ಆತನ ಮನೆಯ ಹತ್ತಿರದಲ್ಲಿಯೇ ನಮ್ಮ ಮನೆ ಇತ್ತು. ನಾನು ಮದುವೆಯಾಗಿ 12 ವರ್ಷವಾಗಿದ್ದು, ಅದಕ್ಕೂ ಪೂರ್ವದಲ್ಲಿ ನಾನು ಕುಕ್ಕೆಹಳ್ಳಿಯಲ್ಲಿ ವಾಸಮಾಡಿಕೊಂಡಿರುತ್ತೇನೆ. ಕುಕ್ಕೆಹಳ್ಳಿಯಲ್ಲಿ ವಾಸವಾಗಿರುವಾಗ ಮೃತ ಕೃತಿಕ್ ನ ಜೊತೆ ಮೊಬೈಲ್ ನಲ್ಲಿ ಮಾತನಾಡುತ್ತಿದ್ದು, ಅಲ್ಲದೇ ಆತ ನಮ್ಮ ಮನೆಗೆ ಬಂದು ಹೋಗುತ್ತಿದ್ದನು. ನಾನು ಮದುವೆಯಾದ ನಂತರ ಗಂಡನ ಮನೆಯಲ್ಲಿ ವಾಸಮಾಡುತ್ತಿದ್ದಾಗ ಮೃತ ಕೃತಿಕ್ ಅಲ್ಲಿಯ ದೇವಸ್ಥಾನಕ್ಕೆ ಬಂದಾಗ ನನ್ನ ಗಂಡನ ಮನೆಗೆ ಬಂದು ಮಾತನಾಡಿಕೊಂಡು ಹೋಗುತ್ತಿದ್ದನು. ಆರೋಪಿಯ ಪರಿಚಯ ಇತ್ತು. ಆತ ನನ್ನ ಗಂಡನ ಮನೆಯ ಊರಿನವನಾಗಿದ್ದು, ಆತನ ಹೆಂಡತಿಯ ಮನೆ ಕುಕ್ಕೆಹಳ್ಳಿಯ ಬಜೆ ಗ್ರಾಮದಲ್ಲಿದೆ. ಆರೋಪಿ ಮತ್ತು ಮೃತ ಕೃತಿಕ್ ಒಬ್ಬರಿಗೊಬ್ಬರು ಮಾತನಾಡುತ್ತಿದ್ದರು. ನಾನು ಮತ್ತು ಮೃತ ಕೃತಿಕ್ ಅನ್ಯೋನ್ಯವಾಗಿದ್ದ ಕಾರಣ ಕೃತಿಕ್ ನ ತಂದೆ ನನ್ನ ತಾಯಿಯ ಮನೆಗೆ ಬಂದು ನಮ್ಮೊಂದಿಗೆ ರಾಜಿ ಮಾಡಿ, ಹೆಚ್ಚಿಗೆ ಮಾತನಾಡುವುದು ಬೇಡ ಎಂದು ತಿಳಿಸಿ ಹೇಳಿ ಹೋಗಿರುತ್ತಾರೆ. ನಂತರ ನಾನು ನನ್ನ ಮೊಬೈಲ್ ನ ದೂರವಾಣಿ

ಸಂಖ್ಯೆಯನ್ನು ಬದಲಾಯಿಸಿರುತ್ತೇನೆ. ನಂತರ ಕೃತಿಕ್ ನ ತಂದೆ ತೀರಿ ಹೋಗಿರುತ್ತಾರೆ. ಆತನ ತಾಯಿ ಸಹ ಮೃತ ಪಟ್ಟಿರುತ್ತಾರೆ. ಕೃತಿಕ್ ಫೋನ್ ನಲ್ಲಿ ಮಾತನಾಡುತ್ತಿದ್ದಾಗ ತಂದೆ ತಾಯಿಯನ್ನು ಕಳೆದುಕೊಂಡ ಬಗ್ಗೆ ಟೆನ್ಷನ್ ನಿಂದ ಮಾತನಾಡುತ್ತಿದ್ದ.

2. ಸುಮಾರು 3 ವರ್ಷದ ಹಿಂದೆ ಆರೋಪಿ ನನ್ನ ಅಣ್ಣ ಯಶವಂತನಿಗೆ ದೂರವಾಣಿ ಕರೆ ಮಾಡಿ ಕೃತಿಕ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿಸಿರುತ್ತಾನೆ. ಆತನಿಂದ ಒಂದು ಮರಣ ಪತ್ರ ಸಿಕ್ಕಿರುತ್ತದೆ ಎಂದು ತಿಳಿಸಿರುತ್ತಾನೆ. ಸದ್ರಿ ಮರಣ ಪತ್ರದಲ್ಲಿ ನನ್ನ ಹೆಸರು ಉಲ್ಲೇಖಿಸಿರುತ್ತಾನೆ ಎಂದು ತಿಳಿಸಿರುತ್ತಾರೆ. ನಂತರ ಕೃತಿಕ್ ಈತನ ಮನೆಯವರಿಗೆ ಆರೋಪಿ ಆತನನ್ನು ಕೊಲೆ ಮಾಡಿರುವ ಬಗ್ಗೆ ಸಂಶಯ ಉಂಟಾಗಿತ್ತು. ಮೃತ ಕೃತಿಕ್ ನನ್ನೊಂದಿಗೆ ದೂರವಾಣಿಯಲ್ಲಿ ಮಾತನಾಡುತ್ತಿರುವಾಗ ನನ್ನ ತಂದೆ ತಾಯಿ ಮೃತ ಪಟ್ಟ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದು, ಮತ್ತು ಮುಂಡ್ಕೂರಿಗೆ ಬಂದಾಗ ನನ್ನೊಂದಿಗೆ ಮಾತನಾಡಿ ಹೋಗುತ್ತಿದ್ದನು. ಆದರೆ ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆ ನನ್ನ ಬಳಿ ಯಾವತ್ತೂ ಹೇಳಿಲ್ಲ.

<u>ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದ</u>

1. ಕೃತಿಕ್‌ನ ತಂದೆ ತೀರಿ ಹೋದ ನಂತರ ಆತ ನನ್ನ ಜೊತೆ ಸಂಪರ್ಕದಲ್ಲಿರಲಿಲ್ಲ. ಕೃತಿಕ್ ಗೆ ಯಾವುದೇ ಕೆಲಸ ಇರಲಿಲ್ಲ. ಆತ ತಂದೆಯ ಹಣವನ್ನೇ ಖರ್ಚು ಮಾಡುತ್ತಿದ್ದನು. ಆತನಿಗೆ ಕುಡಿತದ ಚಟ ಇತ್ತು ಎನ್ನುವುದು ಗೊತ್ತಿಲ್ಲ. ಆತ ಇಲಿ ಪಾಷಣ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದ ಎಂದರೆ ಸರಿ. ಆತ ತುಂಬಾ ಟೆನ್ಷನ್ ತೆಗೆದುಕೊಳ್ಳುತ್ತಿದ್ದ ಎಂದರೆ ಸರಿ. ಆತ ಆಗಾಗ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದ ಎನ್ನುವುದು ಗೊತ್ತಿಲ್ಲ. ಆತನ ಮನೆಯವರು ಆರೋಪಿಯ ಮೇಲೆ ಯಾಕೆ ಪ್ರಕರಣ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಪೊಲೀಸರು ಏನೆಲ್ಲಾ ಬರೆದಿದ್ದಾರೆ ಎಂದು ಗೊತ್ತಿಲ್ಲ. ಯಶವಂತ ನನ್ನ ಗಂಡನ ಭಾವ. ಅವರು ನನ್ನ ಬಳಿ ಕೃತಿಕ್ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಮಾತ್ರ ಹೇಳಿರುತ್ತಾರೆ. ಬೇರೆ ವಿಷಯ ಹೇಳಿಲ್ಲ. ಕೃತಿಕ್ ಜಿಗುಪ್ಸೆಯಲ್ಲಿದ್ದ ಎಂದರೆ ಸರಿ. ಆತನ ಜೀವನ ಕ್ರಮ ಸರಿ ಇರಲಿಲ್ಲ ಎಂದರೆ ಗೊತ್ತಿಲ್ಲ. ಆತನ ಮನೆಯವರೊಂದಿಗೆ ಕೂಡ ಆತನ ಬಾಂದವ್ಯ ಒಳ್ಳೆಯದಿರಲಿಲ್ಲ ಎನ್ನುವುದು ಗೊತ್ತಿಲ್ಲ. ಆತನ ಆಸ್ತಿ ಎಲ್ಲಾ ಆತನ ಮನೆಯವರಿಗೆ ಸೇರುತ್ತದೆ ಎಂದರೆ ಗೊತ್ತಿಲ್ಲ. ಕೃತಿಕ್ ನ ಜೀವನ ಕ್ರಮ ಸರಿ ಇಲ್ಲದೇ, ಜೀವನದಲ್ಲಿ ಜಿಗುಪ್ಸೆ ಬಂದು ಆತ್ಮಹತ್ಯೆ

ಮಾಡಿಕೊಂಡಿದ್ದಾನೆ ಎಂದು ಗೊತ್ತಿಲ್ಲ. ಮರಣ ಪತ್ರದಲ್ಲಿ ಬರೆದಿರುವ ವಿಷಯವನ್ನು ಕೃತಿಕ್ ಫೋನ್ ನಲ್ಲಿ ನನಗೆ ಮೊದಲು ಸಹ ಹೇಳಿದ್ದರು ಎಂದರೆ ಸರಿಯಲ್ಲ. ಕೃತಿಕ್ ನನ್ನ ಬಳಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಆಗಾಗ್ಗೆ ಹೇಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಜೊತೆ ಕೃತಿಕ್ ಅನ್ಯೋನ್ಯತೆಯಿಂದ ಇದ್ದರು ಎಂದರೆ ಸರಿ. ನನ್ನ ಜೊತೆ ಮಾತನಾಡುವುದನ್ನು ನಿಲ್ಲಿಸಿದ ನಂತರದಲ್ಲಿ ಕೃತಿಕ್ ತುಂಬಾ ಬೇಜಾರಿನಲ್ಲಿದ್ದ ಎಂದರೆ ಗೊತ್ತಿಲ್ಲ. ಈ ಕಾರಣಕ್ಕೂ ಸಹ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u>ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ